# ಮಾಲಿನ್ಯ ನಿಯಂತ್ರಣ ಮಂಡಳಿ ವಿರುದ್ಧ ಕ್ರಮ ಕೈಗೊಳ್ಳಿ

■ **ವಿಜಯಕುಮಾರ್ ಚಂದರಗಿ**

**ಬೆಂಗಳೂರು:** ಕರ್ತವ್ಯಲೋಪ ಎಸಗಿದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಿ, 'ಡೆಡ್ ಸಿಟಿ'ಗೆ ಕಾರಣವಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ವನ್ನು ವಜಾಗೊಳಿಸಿ, ಶಾಲಾ-ಕಾಲೇಜುಗಳಲ್ಲಿ ಪರಿಸರ ಶಿಕ್ಷಣ ಕಡ್ಡಾಯಗೊಳಿಸಿ, ಶಾಲಾ-ಕಾಲೇಜುಗಳಿಂದಲೇ ಕೆರೆಗಳ ನಿರ್ವಹಣೆಗೆ ಸೂಚಿಸಿ....

-ಹೀಗಂತ ಸರ್ಕಾರಕ್ಕೆ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ)ಯ ವಿಜ್ಞಾನಿಗಳು ಸಲಹೆ ಮಾಡಿರುವುದು ತಡವಾಗಿ ಬೆಳಕಿಗೆಬಂದಿದೆ. 'ಕೆರೆಗಳ ಸಂರಕ್ಷಣೆಗೆ ಕೈಗೊಳ್ಳಬೇಕಾದ ಕಾರ್ಯತಂತ್ರ ಮತ್ತು ಕ್ರಿಯಾಯೋಜನೆಗಳು' ಕುರಿತು ನೀಡಿದ ವರದಿಯಲ್ಲಿ ವಿಜ್ಞಾನಿಗಳು ಸರ್ಕಾರದ ಎರಡು ಅಂಗಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಲಹೆ ಮಾಡಿದ್ದಾರೆ.

ನಗರದಲ್ಲಿ ಅವೈಜ್ಞಾನಿಕವಾಗಿ ಕೈಗಾರಿಕಾ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಡಲಾಗಿದೆ. ಅಭಿವೃದ್ಧಿ ಕಾರ್ಯಗಳಿಗೇ ಹೆಚ್ಚು ಒತ್ತುಕೊಟ್ಟಿದ್ದರಿಂದ ನಗರದ ಜನಸಂಖ್ಯೆ ಹೆಚ್ಚಾಯಿತು. ಸಹಜವಾಗಿ ಇದು ಇಲ್ಲಿನ ಮೂಲಸೌಕರ್ಯ, ನೈಸರ್ಗಿಕ ಸಂಪತ್ತಿನ ವಿಪರೀತ ಬಳಕೆಗೆ ಕಾರಣವಾಯಿತು. ಇದೆಲ್ಲದರ ಪರಿಣಾಮ ಶೇ. 78ರಷ್ಟು ಮರಗಳು ಹಾಗೂ ಶೇ. 79ರಷ್ಟು ಜಲಮೂಲಗಳು ಮಾಯವಾದವು. ಇದಕ್ಕೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಬಿಡಿಎ ಹೊಣೆ ಎಂದು ಐಐಎಸ್ಸಿ ವಿಜ್ಞಾನಿಗಳು ನೇರ ಆರೋಪ ಮಾಡಿದ್ದಾರೆ.

ನಗರದ ಜಲ, ನೆಲ, ಗಾಳಿ ಕಲುಷಿತ ಆಗದಂತೆ ತಡೆಗಟ್ಟುವುದು ಮಾಲಿನ್ಯ ನಿಯಂತ್ರಣ ಮಂಡಳಿ ಜವಾಬ್ದಾರಿ. ಆದರೆ, ಬಹುತೇಕ ಕೆರೆಗಳು ಮಾಯವಾಗಿವೆ. ಇನ್ನು ಹಲವು ಕೆರೆಗಳು ಮಲೀನಗೊಂಡಿವೆ. ವಾತಾವರಣದಲ್ಲಿ ಗಾಳಿ ಕೂಡ ಕಲುಷಿತಗೊಂಡಿದೆ. ಇದಕ್ಕೆಲ್ಲಾ ಅವಕಾಶ ಮಾಡಿಕೊಡುವ ಮೂಲಕ ಕರ್ತವ್ಯ ಲೋಪ ಎಸಗಿದ ಮಂಡಳಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರಕ್ಕೆ ನೀಡಿದ ವರದಿಯಲ್ಲಿ ಸಲಹೆ ಮಾಡಿದೆ.

■ **ಡೆಡ್‌ಸಿಟಿಯಾಗಿ ಪರಿವರ್ತನೆ:** ಅಲ್ಲದೆ, ಬಿಡಿಎ ಅಸ್ತಿತ್ವಕ್ಕೆ ಬಂದ ನಂತರದ ಕಾರ್ಯಾವಧಿಯಲ್ಲಿ ಉದ್ಯಾನ ನಗರಿಯು 'ಡೆಡ್ ಸಿಟಿ'ಯಾಗಿ ಮಾರ್ಪಟ್ಟಿದ್ದು, ಈ ಪ್ರಾಧಿಕಾರವನ್ನೇ ರದ್ದುಗೊಳಿಸಬೇಕು ಎಂದು ವಿಜ್ಞಾನಿಗಳು ಖಾರವಾಗಿ ಹೇಳಿದ್ದಾರೆ.

ಕಳೆದ ನಾಲ್ಕು ದಶಕಗಳಲ್ಲಿ ಬೆಂಗಳೂರು ನಗರದ ವಿಸ್ತೀರ್ಣ ಶೇ. 925ರಷ್ಟು ಬೆಳೆದಿದೆ. ಯೋಜನಾರಹಿತ ನಗರೀಕರಣದ ಪರಿಣಾಮ ನಗರದಲ್ಲಿ ದಿಢೀರ್ ಪ್ರವಾಹ, ವಾತಾವರಣ ಬದಲಾವಣೆ, ಉಷ್ಣವರ್ಧಕ ಅನಿಲದ ಪ್ರಮಾಣ ಹೆಚ್ಚಳ ಆಗಿದೆ. ಯೋಜಿತ ನಗರವನ್ನು ನಿರ್ಮಿಸುವಲ್ಲಿ ವಿಫಲವಾದ ಹಿನ್ನೆಲೆಯಲ್ಲಿ ಬಿಡಿಎ ಅನ್ನು ವಿಸರ್ಜಿಸಬೇಕು ಎಂದು ವರದಿಯಲ್ಲಿ ಹೇಳಲಾಗಿದೆ.

ಕೆರೆಗಳ ನಿರ್ವಹಣೆ ಜವಾಬ್ದಾರಿಯನ್ನು ಶಾಲಾ-ಕಾಲೇಜುಗಳಿಗೆ ವಹಿಸಬೇಕು ಎಂದು ಸಲಹೆ ಮಾಡಿರುವ ವಿಜ್ಞಾನಿಗಳು, ಶಾಲಾ-ಕಾಲೇಜುಗಳಲ್ಲಿ ಪರಿಸರ ಶಿಕ್ಷಣ ಕಡ್ಡಾಯಗೊಳಿಸಬೇಕು ಎಂದು ತಿಳಿಸಿದ್ದಾರೆ.

ಸುಮಾರು 23 ಸಲಹೆಗಳನ್ನು ಮಾಡಿರುವ ವಿಜ್ಞಾನಿಗಳು, ಕೆರೆ ಅಚ್ಚುಕಟ್ಟುಗಳಲ್ಲಿ ಸ್ಥಳೀಯ ಪ್ರಭೇದಗಳ ಸಸಿ ನೆಡಬೇಕು. ಸೂಕ್ತವಾದ ತ್ಯಾಜ್ಯನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಿ, ಜೌಗುಪ್ರದೇಶಗಳನ್ನು ನಿರ್ಮಿಸಬೇಕು.

ನಗರದಟ್ಟಣೆಯನ್ನು ತಗ್ಗಿಸುವ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಪರಿಸರಕ್ಕೆ ನೇರ ಅಥವಾ ಪರೋಕ್ಷವಾಗಿ ಪರಿಣಾಮ ಬೀರುವ ಯಾವುದೇ ಹೊಸ ಯೋಜನೆಗಳಿಗೆ ಅವಕಾಶ ನೀಡಬಾರದು. ಸರ್ಕಾರ ಅಂಗಸಂಸ್ಥೆಗಳು ಎನಿಸಿಕೊಂಡರೂ ಒಂದಕ್ಕೊಂದು ಸಂಬಂಧ ಇಲ್ಲದಂತಿವೆ. ಅವೆಲ್ಲವನ್ನೂ ಒಂದೇ ಸೂರಿನಡಿ ತಂದು, ಪರಿಸರ ಸಂರಕ್ಷಣೆಗೆ ಏಜೆನ್ಸಿಯೊಂದನ್ನು ಮಾಡಬೇಕು ಎಂದು ಪಟ್ಟಿಮಾಡಿದ್ದಾರೆ.




**ಕೆ**ರೆ ಸೇರಿದಂತೆ ನಗರದ ವಾಯು, ನೆಲ, ಜಲ ರಕ್ಷಣೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ವಿಸ್ತೃತ ವರದಿ ನೀಡಲಾಯಿತು. ಅದರಲ್ಲಿನ ಪ್ರಮುಖ ಅಂಶಗಳನ್ನು ಪಟ್ಟಿಮಾಡಿ, ಸಂಕ್ಷಿಪ್ತ ವರದಿ ಸಲ್ಲಿಸುವಂತೆ ಸೂಚಿಸಿತು. ಅದರಂತೆ ಐಐಎಸ್ಸಿ ಸಲಹೆಗಳನ್ನು ಒಳಗೊಂಡ ಸಂಕ್ಷಿಪ್ತ ವರದಿಯನ್ನು ಸಲ್ಲಿಸಿದೆ. ಅದರಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಬಿಡಿಎ ಲೋಪದೋಷಗಳನ್ನೂ ಗಮನಕ್ಕೆ ತರಲಾಗಿದೆ.

■ **ಡಾ.ಟಿ.ವಿ. ರಾಮಚಂದ್ರ,**
ಪರಿಸರ ವಿಜ್ಞಾನ ಕೇಂದ್ರ, ಭಾರತೀಯ ವಿಜ್ಞಾನಗಳ ಸಂಸ್ಥೆ (ಐಐಎಸ್ಸಿ)